ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.

ಸಿ.ಸಿ. ನಂ. 45/2019 **DW – 1**

ದಿನಾಂಕಃ **21.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ನೆಲ್ಲೀರ ಎಂ. ಸುಬ್ಬಯ್ಯ |
| ತಂದೆ ಹೆಸರು | : | ಲೇಟ್ ನೆಲ್ಲೀರ ಎಸ್ ಮುದ್ದಯ್ಯ |
| ವಯಸ್ಸು | : | 73 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಬಿರುನಾಣಿ ಗ್ರಾಮ |

ಮುಖ್ಯ ವಿಚಾರಣೆಃ ಸ್ವತಃ -

ಚಾಸಾ 1 ನನ್ನ ಚಿಕ್ಕಪ್ಪನ ಮಗ. ಇವರ ತಾತ ಮತ್ತು ತಂದೆ ತೀರಿಕೊಂಡ ನಂತರ ನಮ್ಮ ಆಸ್ತಿಗಳನ್ನು ಇವರ ಹೆಸರಿಗೆ ಮೋಸದಿಂದ ಮಾಡಿಕೊಂಡು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಚಾಸಾ 1 ರವರ ಆಸ್ತಿಗಳು ಬಾಡಗರ ಕೇರಿ ಗ್ರಾಮದಲ್ಲಿರುತ್ತದೆ. ಸರ್ಕಾರಕ್ಕೆ ನಾನು ಈ ಬೋಗಸ್ ದಾಖಲೆಗಳನ್ನು ಕೊಟ್ಟು ಈಗ ತನಿಖೆ ಹಂತದಲ್ಲಿದೆ. ಇವರು ದೂರು ಕೊಟ್ಟ ದಿವಸ ತನ್ನ ಕಾಫಿ ಯಾರ್ಡ್ ನಲ್ಲಿ ಸರ್ವೆ ನಂ. 175 ರಲ್ಲಿ ಬಿರುನಾಣಿಯಲ್ಲಿ ಮುಖ್ಯ ರಸ್ತೆಯ ಮಧ್ಯ ಭಾಗದಲ್ಲಿ ಮಧ್ಯಾಹ್ನದ ಮೇಲೆ ಕಾಫಿಯನ್ನು ಮಾರಲು ಲಾರಿಯನ್ನು ತರೆಸಿ ಗೇಟ್‌ನ ಹತ್ತಿರ ಇದ್ದೆ.

ಚಾಸಾ 1 ರವರ ಜೊತೆ ಚಾಸಾ 4 ರವರು ಮತ್ತು ಒಬ್ಬ ನಿಖಿಲ್ ರವರಿದ್ದರು. ನನ್ನ ಜೊತೆ ಮಾತನಾಡಬೇಕೆಂದು ಸುಮಾರು 3 ಗಂಟೆಗೆ ನನ್ನನ್ನು ಕರೆದರು. ಕಾಫಿ ಮಾರಾಟ ಮಾಡುತ್ತಿದ್ದಕ್ಕೆ ಒಂದು ಗಂಟೆಯ ನಂತರ ಬನ್ನಿ ಎಂದು ಅವರಿಗೆ ಹೇಳಿದೆ. ಅವರಿಬ್ಬರು ಹೋಗಲಿಲ್ಲ, ಅಲ್ಲೇ ಇದ್ದರು. ಕಾಫಿ ತೂಕ ಮಾಡಿ ಮಾರುವುದು ಸುಮಾರು 6 ಗಂಟೆ ಆಯಿತು. ಲಾರಿ ಹೋದ ಮೇಲೆ ಅವರನನು ಮಾತನಾಡಿಸಿದೆ. ಅವರಿಬ್ಬರು ಏಕಾಏಕಿ ನನ್ನ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದೆ ಬೈದು, ಕಾರಿಗೆ ಒದ್ದು ನನ್ನ ದಾಖಲೆಗಳನ್ನು ವಜಾ ಮಾಡಿಸುತ್ತೇನೆಂದು ಹೇಳಿದ. ನಾನು ಬೆಂಗಳೂರಿಗೆ ಹೋದೆ. ದಾರಿಯಲ್ಲೇ ಶ್ರೀಮಂಗಲ ಪೊ. ಠಾಣೆಗೆ ಫೋನ್ ಮಾಡಿ ಈ ವಿಚಾರಿ ತಿಳಿಸಿ ಲಿಖಿತ ದೂರು ನೀಡುವುದಾಗಿ ಹೇಳಿದೆ. ಮರುದಿನ ಲಿಖಿತ ದೂರನ್ನು ಕೊಟ್ಟೆ ಸಾಕ್ಷಿ ಆ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ ಡಿ 1 ಎಂದು ಗುರುತಿಸಲಾಯಿತು. ಆ ದೂರನ್ನು ಕೊಟ್ಟಿದ್ದಕ್ಕೆ

ಚಾಸಾ 1 ರವರು ನನ್ನ ಮೇಲೆ ಈ ದೂರನ್ನು ಕೊಟ್ಟಿದ್ದಾರೆ. ನಿ ಪಿ 6 ದಾಖಲೆ ಸುಳ್ಳಿನಿಂದ ಕೂಡಿದ್ದು ಅದನ್ನು ಈ ಕೇಸ್‌ಗೋಸ್ಕರ ಸೃಷ್ಟಿಸಿಕೊಂಡಿರುತ್ತಾರೆ. ನಾನು ವೈದ್ಯರನ್ನು ಪಾಟೀ ಸವಾಲು ಮಾಡಿದ್ದೇನೆ. ನನಗೆ ತೊಂದರೆ ಕೊಡಲು ನನ್ನ ಆಳುಗಳನ್ನು ಕೂಡ ಕಿರುಕೊಳ ಕೊಟ್ಟು ಹೊಡದಿರುತ್ತಾರೆ. ಚಾಸಾ 1 ಮರಗಳ್ಳ, ಮರಳು ಗಳ್ಳ, ದೊಡ್ಡ ಆಸ್ತಿವಂತರು.ಚಾಸಾ 1 ರವರು ಮೀನುಗಾರ ಎಂದು ಸುಳ್ಳಾಗಿ ತೋರಿಸಿಕೊಂಡಿರುತ್ತಾರೆ. ಚಾಸಾ 1 ರವರಿಗೆ ಟಿಂಬರ್ ವ್ಯಾಪಾರವಿದ್ದು ತುಂಬಾ ಹಣವಂತ. ಆದ್ದರಿಂದ ಈ ಪ್ರಕರಣವನ್ನು ವಜಾಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅವರ ಮೇಲೆ ವೆಚ್ಚದ ಹಣ ಹಾಕಿ ನನಗೆ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

<u>ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ -</u>

ಕೊಡಗಿನಲ್ಲಿ ನೆಲ್ಲೀರ ಕುಟುಂಬದವರು ಎರಡು ಗ್ರಾಮಗಳಿದ್ದು ಬಿರುನಾಣಿ ಮತ್ತು ಬಾಡಗರ ಕೇರಿ. ಚಾಸಾ 1 ರವರ ಆಸ್ತಿಗಳು ಬಾಡಗರಕೇರಿಯಲ್ಲಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಮ್ಮ ಆಸ್ತಿಗಳು ಬಿರುನಾಣಿ ಗ್ರಾಮದಲ್ಲಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಚಾಸಾ 1 ರವರು ನಮ್ಮ ಬಿರುನಾಣಿ ಗ್ರಾಮದಲ್ಲಿರುವ ನಮ್ಮ ಜಮೀನಿಗೆ ಸೇರಿದ ದಾಖಲಾತಿಗಳನ್ನು ಅವರ ಹೆಸರಿಗೆ ಸೃಷಿಸಿಕೊಂಡ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಿ ಡಿ 1 ದೂರಿನನ್ವಯ FIR ದಾಖಲಾಗಿಲ್ಲ. ಪೊಲೀಸರು ತನಿಖೆ ಕೂಡ ಮಾಡಲಿಲ್ಲ. FIR ದಾಖಲಾಗದಿದ್ದಕ್ಕೆ ಮುಂದಿನ ಕ್ರಮ ಕೈ ಗೊಂಡಿಲ್ಲ, ಆದರೆ ನಿ ಡಿ 1 ಅನ್ನು ಎಸ್. ಪಿ. ಅವರಿಗೆ ಕಳುಹಿಸಿರುತ್ತೇನೆ. ಚಾಸಾ 1 ರವರ ಮೇಲೆ ಮರಗಳ್ಳ ಅಥವಾ ಮರುಳುಗಳ್ಳ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ. ಚಾಸಾ 1 ರವರು ಕೊಟ್ಟಿರುವುದು ನಿಜ ಇರುತ್ತದೆ, ಅವರ ಮೇಲಿನ ದ್ವೇಷಕ್ಕೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರ ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ